**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ ಇ-ಆಡಳಿತ/UDISE/2012-13

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 20/07/2017.

**ಸುತ್ತೋಲೆ**

**ವಿಷಯ:** ಪದವಿ ಪೂರ್ವ ಕಾಲೇಜುಗಳಿಗೆ UDISE ಕೋಡ್ ಕಡ್ಡಾಯ ಮಾಡಿರುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 22/11/2016 ಹಾಗೂ ದಿ:04/01/2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ UDISE ಕೋಡ್ ಮಾಹಿತಿಯನ್ನು ಎಲ್ಲಾ ಪದವಿ ಪೂರ್ವ ಕಾಲೇಜಿನವರು ಪಿಯು ಆನ್‌ಲೈನ್ ಪೋರ್ಟಲ್‌ನಲ್ಲಿ ನಮೂದಿಸಿ **ಎಸ್‌ಟಿಎಸ್** ಪೋರ್ಟಲ್‌ನಲ್ಲಿ ರಿಜಿಸ್ಟರ್ ಆಗಲು ಸೂಚಿಸಿಲಾಗಿತ್ತು ಹಾಗೂ UDISE ಕೋಡ್ ರಚಿಸದ ಪದವಿ ಪೂರ್ವ ಕಾಲೇಜುಗಳಿನವರು ಸಂಬಂಧಪಟ್ಟ ಜಿಲ್ಲಾ ಡಿಡಿಪಿಐ ಕಛೇರಿಯಿಂದ ಸದರಿ ಕೋಡ್ ಪಡೆದು ಆನ್‌ಲೈನ್‌ಲ್ಲಿ ನಮೂದಿಸಲು ಸೂಚಿಸಲಾಗಿತ್ತು. ಆದರೆ ಈ ಪತ್ರದೊಂದಿಗೆ ಲಗತ್ತಿಸಿರುವ ಕಾಲೇಜಿನವರು ಇನ್ನೂ ಆನ್‌ಲೈನ್ ಪೋರ್ಟಲ್‌ನಲ್ಲಿ UDISE ಕೋಡ್ ನಮೂದಿಸಿರುವುದಿಲ್ಲ.

ಈ ಸಂಬಂಧ UDISE ಕೋಡ್ ರಚಿಸದೇ ಇರುವ ಪದವಿ ಪೂರ್ವ ಕಾಲೇಜುಗಳು ಕಡ್ಡಾಯವಾಗಿ ಜಿಲ್ಲಾ ಡಿಡಿಪಿಐ ಕಛೇರಿಯಿಂದ ಪಡೆಯಲು ಸೂಚಿಸಲಾಗಿದೆ. ಮುಂದುವರೆದು ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಪದವಿ ಪೂರ್ವ ಕಾಲೇಜುಗಳ ಯುಡೈಸ್ ಕೋಡನ್ನು ಕ್ರೋಢೀಕರಿಸಿ EXCEL ನಲ್ಲಿ ದಿನಾಂಕ 18/08/2017 ರೊಳಗಾಗಿ ಕೇಂದ್ರ ಕಛೇರಿಗೆ ಇ-ಮೇಲ್ ಮುಖಾಂತರ ಸಲ್ಲಿಸಲು sts.karnataka.gov.in/STS/main.htm ಪೋರ್ಟಲ್‌ನಲ್ಲಿ ರಿಜಿಸ್ಟರ್ ಆಗಿ ಲಾಗಿನ್ ಮಾಡಲು ಸೂಚಿಸಲಾಗಿದೆ. ಒಂದುವೇಳೆ ಪದವಿ ಪೂರ್ವ ಕಾಲೇಜುಗಳು ಯುಡೈಸ್ ಕೋಡ್ ರಚಿಸದಿದ್ದಲ್ಲಿ, ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರುಗಳನ್ನು ಹಾಗೂ ಉಪನಿರ್ದೇಶಕರನ್ನು ನೇರ ಹೊಣೆ ಮಾಡಲಾಗುವುದು.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
2. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ( UDISE ಕೋಡ್‌ನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ಭರ್ತಿಮಾಡಿ UDISE ಪೋರ್ಟಲ್‌ನಲ್ಲಿ ರಿಜಿಸ್ಟರ್ ಆಗುವುದು ಹಾಗೂ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರಿಗೆ ನೀಡುವುದು)
4. ಕಚೇರಿ ಪ್ರತಿ.